ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಕವಿಪ್ರನಿನಿ/ಬಿ66/23611/2021-22

ದಿನಾಂಕ : 20 NOV 2021

20 NOV 2021

## ಇಲಾಖಾ ಪರೀಕ್ಷೆಗಳ ವೇಳಾ ಪಟ್ಟಿ –ಡಿಸೆಂಬರ್-2021

### ಕನ್ನಡ ಭಾಷಾ ಪರೀಕ್ಷೆ:

| ದಿನಾಂಕ | ಸಮಯ | ಸಂಕ್ಷಿಪ್ತವಾಗಿ ವಿಷಯ |
|---|---|---|
| 06.12.2021 (ಸೋಮವಾರ) | ಬೆಳಗ್ಗೆ 9.30 ರಿಂದ 11.30 ರವರೆಗೆ | ಕನ್ನಡ ಭಾಷಾ ಪತ್ರಿಕೆ-1 – ಪಠ್ಯಪುಸ್ತಕ |
| | ಮಧ್ಯಾಹ್ನ 12.00 ರಿಂದ 1.00 ರವರೆಗೆ | ಕನ್ನಡ ಭಾಷಾ ಪತ್ರಿಕೆ-2 – ಭಾಷಾಂತರ |
| | ಮಧ್ಯಾಹ್ನ 2.30 ರಿಂದ | ಮೌಖಿಕ ಪರೀಕ್ಷೆ |

**ಸೂಚನೆ:** ಕನ್ನಡ ಭಾಷಾ ಪರೀಕ್ಷೆಗಳಿಗೆ ಪಠ್ಯಪುಸ್ತಕಗಳು, ಮಾರ್ಗದರ್ಶಿಕೆಗಳು (ಕೈಪಿಡಿಗಳು) ಟಿಪ್ಪಣಿಗಳು ಮುಂತಾದವುಗಳನ್ನು ಪರೀಕ್ಷಾ ಕೊಠಡಿಯ ಒಳಗೆ ತರುವಂತಿಲ್ಲ.

**ಅಭ್ಯರ್ಥಿಗಳಿಗೆ ಹೆಚ್ಚುವರಿ ಸೂಚನೆಗಳು:**

1. ಅಭ್ಯರ್ಥಿಗಳು ತಮ್ಮ ನೋಂದಣಿ ಸಂಖ್ಯೆಯನ್ನು ಉತ್ತರ ಪುಸ್ತಕದ ನಿಗದಿತ ಸ್ಥಳದಲ್ಲಿ ಮಾತ್ರ ನಮೂದಿಸಬೇಕು. ಆತ/ಆಕೆ ಹೆಚ್ಚುವರಿ ಹಾಳೆಯಲ್ಲಾಗಲಿ ಅಥವಾ ಉತ್ತರ ಪುಸ್ತಕದ ಯಾವುದೇ ಭಾಗದಲ್ಲಾಗಲಿ ತಮ್ಮ ನೋಂದಣಿ ಸಂಖ್ಯೆಯನ್ನು ಬರೆಯಬಾರದು.
2. ಅಭ್ಯರ್ಥಿಗಳು ಉತ್ತರ ಪುಸ್ತಕ ಅಥವಾ ಹೆಚ್ಚುವರಿ ಹಾಳೆಯಲ್ಲಾಗಲಿ ತಮ್ಮ ಹೆಸರು/ಯಾವುದೇ ದೇವರ ಹೆಸರನ್ನು/ಧಾರ್ಮಿಕ ಚಿಹ್ನೆಯನ್ನು/ಮೊಬೈಲ್ ಸಂಖ್ಯೆ/ದೂರವಾಣಿ ಸಂಖ್ಯೆ/ಇಮೇಲ್ ಐ.ಡಿ./ಯಾವ ತರಹದ ಗುರುತನ್ನು ಬರೆಯಬಾರದು/ ಮಾಡಬಾರದು.
3. ಪರೀಕ್ಷಾ ಸಭಾಂಗಣದಲ್ಲಿ ಮುಖ್ಯಪರಿವೀಕ್ಷಕರು/ ಪರಿವೀಕ್ಷಕರು ಯಾವಾಗ ಕೇಳಿದರೂ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಹಾಜರುಪಡಿಸಬೇಕು. ಅಭ್ಯರ್ಥಿಗಳು ಲೇಖನಿ/ಪೆನ್ನುಗಳನ್ನು ತಾವೇ ತರಬೇಕು.
4. ಪರೀಕ್ಷೆಯು ಪ್ರಾರಂಭವಾಗುವುದಕ್ಕೆ ಹತ್ತು ನಿಮಿಷಗಳ ಮುಂಚೆಯೇ ಅಭ್ಯರ್ಥಿಗಳು ತಮ್ಮ ಸ್ಥಳಗಳಲ್ಲಿರಬೇಕು. ಪರೀಕ್ಷೆಯು ಪ್ರಾರಂಭವಾದ ಅರ್ಧಗಂಟೆಯ ನಂತರ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯನ್ನು ಪ್ರವೇಶಿಸಲು ಹಾಗೂ ಪರೀಕ್ಷೆಯು ಪ್ರಾರಂಭವಾದ ನಂತರ ಅರ್ಧಗಂಟೆಗಿಂತ ಮುಂಚಿತವಾಗಿ ಯಾವುದೇ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಿಂದ ಹೊರ ಹೋಗಲು ಅನುಮತಿ ಕೊಡಲಾಗುವುದಿಲ್ಲ. ಪರೀಕ್ಷೆ ನಡೆಯುವ ಸಮಯದಲ್ಲಿ ಅಭ್ಯರ್ಥಿಗಳು ಮಾತನಾಡುವುದಾಗಲಿ ಅಥವಾ ಯಾವುದೇ ರೀತಿ ಸಂಪರ್ಕಿಸುವುದನ್ನಾಗಲಿ ಮಾಡಬಾರದು.
5. ಅಭ್ಯರ್ಥಿಗಳು ಮಾರ್ಜಿನ್ ಎಳೆಯಲು, ಉತ್ತರಗಳಿಗೆ ಕೆಳಗೆರೆ ಹಾಕಲು ಅಥವಾ ಪ್ರಶ್ನೆಗಳ ಸಂಖ್ಯೆ ಬರೆಯಲು ಅಥವಾ ಶೀರ್ಷಿಕೆಗಳು ಇತ್ಯಾದಿಗಳನ್ನು ಬರೆಯಲು ಬಣ್ಣದ ಇಂಕಿನ ಪೆನ್ನು / ಡಾಟ್‌ಪೆನ್ನು ಅಥವಾ ಮತ್ಯಾವುದೇ ಹೆಚ್ಚಿನ ರೀತಿಯಲ್ಲಿ ಗುರುತು ಮಾಡುವ ಪೆನ್ನುಗಳನ್ನು ಬಳಸಕೂಡದು. ಎಲ್ಲಾ ಉತ್ತರಗಳನ್ನು ನೀಲಿ / ಕಪ್ಪು ಇಂಕ್ ಪೆನ್ನು ಅಥವಾ ಆ ಬಣ್ಣದ ರೀಫಿಲ್ ಇರುವ ಡಾಟ್ ಪೆನ್ನುಗಳಲ್ಲಿ ಉತ್ತರಿಸಬೇಕು.

ಉತ್ತರ ಬರೆಯುವ ವೇಳೆಯಲ್ಲಿ ಯಾವುದೇ ಕಾರಣದಿಂದ ಸ್ವಲ್ಪ ಬೇರೆಯ ಬಣ್ಣದ ಇಂಕಿನ ಪೆನ್ನು ಬದಲಾಯಿಸಿದಾಗ ಅದನ್ನು ಪರಿವೀಕ್ಷಕರ ಗಮನಕ್ಕೆ ತಂದು, ಅವರಿಂದ ಅನುಪ್ರಮಾಣ ಮಾಡಿಸಬೇಕು.

6. ಉತ್ತರ ಪುಸ್ತಕದ ಎಡಭಾಗದ ಮಾರ್ಜಿನ್‌ನಲ್ಲಿ ಪ್ರಶ್ನೆ ಪತ್ರಿಕೆಯಲ್ಲಿರುವ ರೀತಿಯಲ್ಲೇ ಪ್ರಶ್ನೆಗಳ ಸಂಖ್ಯೆಯನ್ನು ನಮೂದಿಸಿ, ಸಂಬಂಧಿಸಿದ ಉತ್ತರಗಳನ್ನು ಬರೆಯತಕ್ಕದ್ದು.
7. ಯಾವುದೇ ಉತ್ತರ ಪುಸ್ತಕದಲ್ಲಿ ಪ್ರಶ್ನೆಯ ಸಂಖ್ಯೆ ಮತ್ತು ಅದಕ್ಕೆ ಸಂಬಂಧಿಸಿದ ಉತ್ತರ ಮಾತ್ರ ಇರತಕ್ಕದ್ದು ಮತ್ತು ಪುಟಗಳಿಗೆ ಪುಟ ಸಂಖ್ಯೆ ನಮೂದಿಸತಕ್ಕದ್ದು. ಸಾಮಾನ್ಯವಾಗಿ ಉತ್ತರ ಪುಸ್ತಕದಲ್ಲಿ ಬರೆಯಬಾರದ ಅಲಂಕಾರದ ಬರವಣಿಗೆ, ಕಲಾತ್ಮಕ ಬರವಣಿಗೆ (ಅಭ್ಯರ್ಥಿಯ ಸಹಜ ಕೈಬರಹವನ್ನು ಹೊರತು ಪಡಿಸಿ), ಗುರುತು, ರೇಖೆಗಳು, ಹೊಡೆದು ಹಾಕಿದ ಗೆರೆ, ಇಂಕ್ ಗುರುತು ಸಹಿ ಅಥವಾ ಘೋಷಣೆಗಳನ್ನು ಅಭ್ಯರ್ಥಿಯು ತನ್ನ ಗುರುತನ್ನು ಬಹಿರಂಗಗೊಳಿಸಲು ನಡೆಸಿದ ಪ್ರಯತ್ನ ಎಂದು ಪರಿಗಣಿಸಲಾಗುತ್ತದೆ. ಇಂತಹ ಪ್ರಕರಣಗಳಲ್ಲಿ ಅಭ್ಯರ್ಥಿಯಿಂದ ಯಾವುದೇ ವಿವರಣೆಯನ್ನು ಕೇಳದೆ ದಂಡ ಪ್ರಕ್ರಿಯೆ ಕೈಗೊಳ್ಳಲಾಗುವುದು. ಇಲಾಖಾ ಪರೀಕ್ಷಾ ಮಂಡಳಿಯ ತೀರ್ಮಾನವೇ ಅಂತಿಮವಾಗಿದ್ದು, ಯಾವುದೇ ರೀತಿಯ ಅಜ್ಞಾನ ಅಥವಾ ಅಜಾಗರೂಕತೆ ಅಥವಾ ಕಣ್ತಪ್ಪಿನ ಮನವಿಗಳನ್ನು ಪರಿಗಣಿಸುವುದಿಲ್ಲ. ಆದ್ದರಿಂದ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಉತ್ತರ ಪತ್ರಿಕೆಯ ಹಿಂಬದಿಯಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೆ ಗಮನಿಸಿ, ಪಾಲಿಸತಕ್ಕದ್ದು ಮತ್ತು ಪರಿವೀಕ್ಷಕರು ಪರೀಕ್ಷಾ ಕೊಠಡಿಗಳಲ್ಲಿ ನೀಡುವ ಸೂಚನೆಗಳನ್ನು ಸಹ ಎಚ್ಚರಿಕೆಯಿಂದ ಪಾಲಿಸತಕ್ಕದ್ದು.
8. ಯಾವುದೇ ತರಹದ ಎಲೆಕ್ಟ್ರಾನಿಕ್ಸ್ ಗೆಜೆಟ್‌ಗಳನ್ನು (Mobile Phone,Bluetooth Head phone, Smart camera ಇತ್ಯಾದಿ) ಪರೀಕ್ಷೆಯ ಸಮಯದಲ್ಲಿ ಪರೀಕ್ಷಾ ಕೊಠಡಿಯೊಳಗೆ ತರುವಂತಿಲ್ಲ ಮತ್ತು ಬಳಸುವಂತಿಲ್ಲ. ಒಂದು ವೇಳೆ ತಂದಿದ್ದು ಅಥವಾ ಬಳಸಿದ್ದು ಕಂಡುಬಂದರೆ ಸದರಿಯವರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು.

**ಕೋವಿಡ್-19 ಹಿನ್ನೆಲೆಯಲ್ಲಿ ಅಭ್ಯರ್ಥಿಗಳಿಗೆ ವಿಶೇಷ ಸೂಚನೆಗಳು:**

1. ಕೋವಿಡ್-19 ಹರಡದಂತೆ ರಾಜ್ಯ/ಕೇಂದ್ರ ಸರ್ಕಾರಗಳು ರೂಪಿಸಿರುವ ನಿಯಮಾವಳಿಗಳ ಬಗ್ಗೆ ಅರಿವನ್ನು ಹೊಂದಿರಬೇಕು.
2. ಕೋವಿಡ್-19 ಹರಡದಂತೆ ಕನಿಷ್ಠ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು.
3. ಮುಖಗವಸನ್ನು ಕಡ್ಡಾಯವಾಗಿ ಧರಿಸಬೇಕು.
4. ಅಭ್ಯರ್ಥಿಗಳು ಗುಂಪುಗೂಡುವುದು ಕಡ್ಡಾಯವಾಗಿ ನಿಷೇಧಿಸಿದೆ.
5. ಆಗಿಂದಾಗ್ಗೆ ಸ್ಯಾನಿಟೈಸರ್ ನಿಂದ ಕೈಗಳನ್ನು ತೊಳೆಯಬೇಕು.
6. ಅಭ್ಯರ್ಥಿಗಳು ತಮ್ಮ ವೈಯಕ್ತಿಕ ಸ್ಯಾನಿಟೈಸರ್ ಬಾಟಲಿ, ಕರವಸ್ತ್ರ, ಮುಖಗವಸು ಹಾಗೂ ನೀರಿನ ಬಾಟಲ್‌ಗಳನ್ನು ತರಬೇಕು.
7. ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಕೋವಿಡ್-19 ಯಾವುದಾದರೂ ರೋಗಲಕ್ಷಣಗಳು ಕಂಡುಬಂದಲ್ಲಿ ಕೂಡಲೇ ಪರೀಕ್ಷಾ ಕೇಂದ್ರದ ಮೇಲ್ವಿಚಾರಕರ ಗಮನಕ್ಕೆ ತರುವುದು.

**ಪರೀಕ್ಷೆ ನಡೆಯುವ ಸ್ಥಳ:**

**ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ,**
**ನಂ. 28, ರೇಸ್ ಕೋರ್ಸ್ ರಸ್ತೆ,**
**ಆನಂದರಾವ್‌ವೃತ್ತ, ಬೆಂಗಳೂರು.**

ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ)
ಮತ್ತು ಸದಸ್ಯ ಕಾರ್ಯದರ್ಶಿ
ಇಲಾಖಾ ಪರೀಕ್ಷಾ ಮಂಡಳಿ, ಕವಿಪ್ರನಿನಿ.